# ಅನ್ಯರ ವಸ್ತುವಿನ ವ್ಯಾಮೋಹ ಬೇಡ

■ ಸಿ.ಕೆ. ಗಣಪ್ಪನವರ, ಮುಂಡರಗಿ
ಕಲೆ: ಸಂತೋಷ್ ಸಸಿಹಿತ್ಲು

ಸೋಮು, ರಾಮು ಅವರ ನಡುವೆ ಒಬ್ಬರನ್ನು ಒಬ್ಬರು ಬಿಟ್ಟು ಇರಲಾರದಷ್ಟು ಗೆಳೆತನ ಬೆಳೆದಿತ್ತು. ಒಂದೇ ಕಡೆಗೆ ಮನೆ, ಹಾಗೆ ಇಬ್ಬರು ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಇವರ ಗೆಳೆತನ ಮತ್ತು ಒಡನಾಟ ಇಬ್ಬರ ಕುಟುಂಬದವರ ಸ್ನೇಹಕ್ಕೂ ಕಾರಣವಾಗಿ ಪ್ರತಿಯೊಬ್ಬರ ಮನೆಯಲ್ಲಿ ನಡೆಯುವ ಕಾರ್ಯಕ್ರಮ ಏನೇ ಇದ್ದರೂ ಎರಡು ಕುಟುಂಬದವರು ಅನ್ಯೋನ್ಯವಾಗಿ ಬೆರೆಯುವಂತೆ ಮಾಡಿತ್ತು.

ಹೀಗಿರುವಾಗ ಸೋಮು ಮನೆಯಲ್ಲಿ ವರಲಕ್ಷ್ಮೀ ಪೂಜೆ ನಡೆಯಿತು. ಸಂಭ್ರಮದ ಪೂಜೆಯಲ್ಲಿ ನೆರೆಹೊರೆಯವರು ಮತ್ತು ರಾಮು ತಾಯಿ ಸುಲೋಚನ ಕೂಡ ಭಾಗವಹಿಸಿ ಸಂಭ್ರಮಿಸಿದರು. ಪೂಜೆ ನಡೆದ ಮರುದಿನ ಶಾಲೆಗೆ ರಜೆ ಇದ್ದ ಕಾರಣ ಸೋಮು ಮನೆಗೆ ರಾಮು ಆಟವಾಡಲು ಹೋಗಿದ್ದನು. ಹಿಂದಿನ ದಿನ ಪೂಜೆಗೆ ಸಂಬಂಧಿಗಳು ಬಂದ ಕಾರಣ ಕೆಲಸದಿಂದ ಸುಸ್ತಾಗಿದ್ದ ಸೋಮು ತಾಯಿ ಗಿರಿಜಾ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಮನೆಯಲ್ಲಿ ಸೋಮು ರಾಮು ಬಿಟ್ಟರೆ ಯಾರೂ ಇರಲಿಲ್ಲ, ಯಾವುದೋ ಆಟದ ಸಾಮಾನು ತರಲು ಸೋಮು ರೂಮ್ ಒಳಗೆ ಹೋದಾಗ ರಾಮು ಒಬ್ಬನೆ ಕುಳಿತಿದ್ದ, ನಡುಮನೆಯಲ್ಲಿದ್ದ ಟೇಬಲ್ ಮೇಲೆ ಸಣ್ಣ ಬಾಕ್ಸ್ ಕಂಡಿತು, ರಾಮು ಕುತೂಹಲದಿಂದ ತೆಗೆದುಕೊಂಡು ನೋಡಿದನು. ಅದು ಚಿನ್ನದ ಸರವಾಗಿತ್ತು, ಲಕ್ಷ್ಮೀ ಪೂಜೆಗೆ ಹಾಕಿದ್ದ ಸರ ಸೋಮು ತಾಯಿ ಅಲ್ಲಿಯೇ ಇಟ್ಟಿದ್ದರು.

ರಾಮುವಿನ ಮನಸ್ಸು ಚಂಚಲಗೊಂಡಿತು. ರಾಮುವಿನ ತಂದೆ ತಾಯಿ ಮಧ್ಯಮ ವರ್ಗದವರಾಗಿದ್ದು, ಅಷ್ಟೇನು ಉಳ್ಳವರಾಗಿರಲಿಲ್ಲ, ಸೋಮುವಿನ ಮನೆಯವರು ಅಂಗಡಿ ವ್ಯಾಪಾರ ಹೀಗೆ ಸ್ವಲ್ಪ ಅನುಕೂಲಸ್ಥರಾಗಿದ್ದರು. ರಾಮುವಿನ ಮನೆಯಲ್ಲಿ ಆಗಾಗ ತಾಯಿ ತನ್ನ ತಂದೆಯೊಂದಿಗೆ ಒಂದೆಳೆ ಚಿನ್ನದ ಸರ ಮಾಡಿಸಲಿಲ್ಲ ಎಂದು ಜಗಳ ಮಾಡಿದ್ದ ಪ್ರಸಂಗ ನೆನಪಾಯಿತು.

ತಂದೆ ಅಸಹಾಯಕ ಸ್ಥಿತಿಯಲ್ಲಿಯೇ ಸಮಯ ಬರಲಿ ಎಲ್ಲ ಮಾಡಿಸೋಣ ಎಂದು ಸಮಾಧಾನಿಸುತ್ತಿದ್ದ. ಇದು ರಾಮುವಿಗೆ ನೆನಪಾಯಿತು. ಹುಡುಗು ಮನಸ್ಸು ತಕ್ಷಣಕ್ಕೆ ಆಸೆಯಿಂದ ಚಿನ್ನದ ಸಣ್ಣ ಬಾಕ್ಸ್ ಎತ್ತಿಕೊಂಡು ಕಿಸೆಯಲ್ಲಿಟ್ಟುಕೊಂಡನು. ಸೋಮು ಒಳಗಿನಿಂದ ಬಂದು ಬಾ ಆಟವಾಡೋಣ ಹೊರಗೆ ಎಂದು ಕರೆದಾಗ, ರಾಮು ಒಂದು ರೀತಿಯಲ್ಲಿ ಮನಸ್ಸು ಗಲಿಬಿಲಿಗೊಂಡು ಈಗ ಬೇಡ ನಾನು ಮನೆಗೆ ಹೋಗುತ್ತೇನೆ ಎಂದು ಹೊರಟು ಬಿಟ್ಟಿದ್ದ, ಏನೂ ಗೊತ್ತಿಲ್ಲದ ಸೋಮು ಸರಿಬಿಡು ಎಂದು ಸುಮ್ಮನಿದ್ದ.

ತಾಯಿಗೆ ರಾಮು ದಾರಿಯಲ್ಲಿ ತನಗೆ ಚಿನ್ನದ ಸರ ಸಿಕ್ಕ ಬಗ್ಗೆ ತಾಯಿ ಬಳಿ ಹೇಳಿದಾಗ ಅವಳು ಆಶ್ಚರ್ಯಪಟ್ಟು ಮತ್ತು ಸಂದೇಹದಿಂದ 'ಎಲ್ಲಿಯಾದರೂ ಕದ್ದು ತಂದಿರುವೆಯಾ' ಎಂದಾಗ ರಾಮು 'ಇಲ್ಲಮ್ಮ ನಿಜವಾಗಿ ದಾರಿಯಲ್ಲಿ ಸಿಕ್ಕಿತು' ಎಂದು ಸುಳ್ಳು ಹೇಳಿದ. ಯಾರದೋ ಏನೋ ಆ ಮೇಲೆ ವಿಚಾರಿಸೋಣ ಎಂದು ತಾಯಿ ಅದನ್ನು ಸುರಕ್ಷಿತವಾಗಿ ತೆಗೆದಿಟ್ಟಳು. ಕೆಲವು ದಿನಗಳು ಕಳೆದವು, ಬೇರೆ ಬೇರೆ ಕಾರಣಗಳಿಂದ ರಾಮುವಿನ ತಾಯಿ ಸೋಮುವಿನ ಮನೆಗೆ ಹೋಗಲಾಗಿರಲಿಲ್ಲ, ಸ್ವಲ್ಪದಿನಗಳ ನಂತರ ಸೋಮುವಿನ ಮನೆಗೆ ರಾಮು ತಾಯಿ ಹೋಗಿ ಪರಸ್ಪರ ಮಾತನಾಡುತ್ತ ಇದ್ದಾಗ ಸೋಮುವಿನ ತಾಯಿ ತಮ್ಮ ಮನೆಯಲ್ಲಿ ಸರ ಕಾಣೆಯಾದ ಬಗ್ಗೆ ಪ್ರಸ್ತಾಪಿಸಿದರು.

ರಾಮು ತಾಯಿ ಸುಲೋಚನಳಿಗೆ ಒಂದು ಕ್ಷಣ ಎದೆ ಝುಲ್ ಎಂದಿತು, ಅಂದರೆ ರಾಮು, ಛೇ ಎಂದು ಪೇಚಾಡಿಕೊಂಡಳು. ತಡಮಾಡದೆ, ಮನೆಗೆ ಬಂದು ರಾಮು ಕರೆದು, ಸಮಾಧಾನದಿಂದ ರಾಮು 'ನೀನು ನನ್ನ ಮಗ, ಯಾವ ತಪ್ಪು ಮಾಡಲಿಕ್ಕೆ ಸಾಧ್ಯವಿಲ್ಲ ಹಾಗಂತ ನನ್ನ ಮನಸ್ಸು ಹೇಳುತ್ತಿದೆ, ಗೊತ್ತಿಲ್ಲದೆ ನೀನು ಏನಾದರೂ ಮಾಡಿದರೂ ನಾನು ಕ್ಷಮಿಸುವೆ'

